ಶ್ರೀ ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).— ಅರಣ್ಯದ ಸಮೀಪದಲ್ಲಿರುವ ಹಳ್ಳಿಗಳಲ್ಲಿ ವಾಸಿಸುವ ರೈತರಿಗೆ ಬದ್ದಿರುವ ಒಣ ಎಲೆ ಮತ್ತು ಒಣ ಸೌದೆ ತಲೆಹೊರೆಯಲ್ಲಿ ತರುವ ಸೌಲಭ್ಯ ಇರುವುದು. ಇದಕ್ಕೆ ಯಾವ ತರಪ ರಹದಾರಿಯ ಅವಶ್ಯಕತೆಯಿಲ್ಲ.

ಇದಲ್ಲದೆ ಕಾನು, ಬೆಟ್ಟ, ಸೊಪ್ಪಿನಬೆಟ್ಟ ಬಾಣಿ ಮತ್ತು ಕುಮ್ಕಿ ಪ್ರದೇಶದಲ್ಲಿ ರಿಯಾಯಿತಿ ಹೊಂದಿದವರು ಕಾದಿರಿಸಿದ ಮರಗಳನ್ನು ಬಿಟ್ಟು, ಉಳಿದ ಜಾತಿಯ ಮರಗಳನ್ನು ಮರಕ್ಕೆ ಹಾನಿಯಾಗದಂತೆ ಸೊಪ್ಪನ್ನು ತೆಗೆದು ಗೊಬ್ಬರಕ್ಕೆ ಉಪಯೋಗಿಸಲು ಅವಕಾಶವಿರುತ್ತದೆ.

ಗುಲ್ಬರ್ಗಾ ಜಿಲ್ಲೆಯ ನೂಲಿನ ಗಿರಣಿಯ ಮಂಜೂರಾತಿ.

೪೬. ಬಾಪುಗೌಡ ದರ್ಶನಾಪೂರ (ಷಹಾಪೂರ್) — ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಹಿಂದಿನ ಸರ್ಕಾರ ಗುಲ್ಬರ್ಗಾ ಜಿಲ್ಲೆಗೆ ಒಂದು ನೂಲಿನ ಗಿರಣಿಯನ್ನು ಮಂಜೂರು ಮಾಡಿದ್ದುದು ನಿಜವಲ್ಲವೇ;

(ಆ) ಹಾಗಾದರೆ ಈ ನೂಲಿನ ಗಿರಣಿಯನ್ನು ಎಂದು ಮಂಜೂರು ಮಾಡಲಾಯಿತು ಮತ್ತು ಇದುವರೆವಿಗೆ ಅದು ಸಾಧಿಸಿರುವ ಅಭಿವೃದ್ಧಿ ;

(ಇ) ಆರ್ಥಿಕ ನೆರವಿಗಾಗಿ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ (ಎನ್‌ಸಿಡಿಸಿ)ಯನ್ನು ಸಂಪರ್ಕಿಸಲಾಯಿತೇ,

(ಈ) ಹಾಗಾದರೆ ಎನ್‌ಸಿಡಿಸಿ ಅದನ್ನು ಇತ್ಯರ್ಥ ಮಾಡಿತೇ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

(ಅ) ಹೌದು.

(ಆ) ದಿನಾಂಕ ೨೨-೧೦-೧೯೮೧ರಲ್ಲಿ ಗುಲ್ಬರ್ಗಾದಲ್ಲಿ ಸೇರಿದ್ದ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಯಿತು. ಈ ಗಿರಣಿಯನ್ನು ಸ್ಥಾಪಿಸಲು ಯಾವ ಅಭಿವೃದ್ಧಿ ಕಾರ್ಯವನ್ನೂ ಕೈಗೊಂಡಿರುವುದಿಲ್ಲ.

(ಇ) ಇಲ್ಲ.

(ಈ) ಉದ್ಭವಿಸುವುದಿಲ್ಲ.

ಹೊಸದುರ್ಗ ತಾಲ್ಲೂಕು ಆರ್.ಇ.ಸಿ. ಯೋಜನೆ ಮಂಜೂರಾತಿ.

೪೭. ಶ್ರೀ ಜಿ. ಬಸಪ್ಪ (ಹೊಸದುರ್ಗ). ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ;

(ಅ) ಗ್ರಾಮಾಂತರ ವಿದ್ಯುದ್ದೀಕರಣ (ಆರ್. ಇ. ಸಿ.) ಯೋಜನೆ ಹೊಸದುರ್ಗ ತಾಲ್ಲೂಕಿಗೆ ಯಾವಾಗ ಮಂಜೂರಾಯಿತು ಮತ್ತು ಅದರ ಅವಧಿ ಎಷ್ಟು ?

(ಆ) ಆ ಯೋಜನೆಯಲ್ಲಿ ಎಷ್ಟು ಹಳ್ಳಿಗಳಿಗೆ ವಿದ್ಯುತ್ ಪೂರೈಸಲಾಗಿದೆ.

(ಇ) ಇನ್ನೂ ವಿದ್ಯುತ್ ಕೊಡಬೇಕಾಗಿರುವ ಗ್ರಾಮಗಳ ಸಂಖ್ಯೆ ಎಷ್ಟು

(ಈ) ಉಳಿದಿರುವ ಅವಧಿಯಲ್ಲಿ ಎಲ್ಲಾ ಗ್ರಾಮಗಳಿಗೆ ವಿದ್ಯುತ್ ಪೂರೈಸಲಾಗುವುದೆ ?

ಶ್ರೀ ಜೆ. ಹೆಚ್ ಪಟೇಲ್ (ವಿದ್ಯುಚ್ಛಕ್ತಿ ಮತ್ತು ಅಬ್ಕಾರಿ ಮಂತ್ರಿಗಳು) —

(ಅ) ಯೋಜನೆಗಳ ಮಂಜೂರಾತಿ (ಆರ್.ಇ.ಸಿ.).—

ಹೊಸದುರ್ಗ ೧ನೇ ಯೋಜನೆ ೧೯೮೨] ಅವಧಿ ೫ ವರ್ಷಗಳು

ಹೊಸದುರ್ಗ ೨ನೇ ಯೋಜನೆ ೧೯೮೨]